ದಿವಸ ಹೊಸದಾಗಿ ಬಂದಿರತಕ್ಕಂಥ ಔಷಧಿಗಳು ನಗರ ಸಭೆ ಮತ್ತು ಆಸ್ಪತ್ರೆಗಳಲ್ಲಿ ಇಲ್ಲ. ಆದ್ದರಿಂದ ಹೊಸ ಔಷಧಿಗಳನ್ನು ನಗರ ಸಭೆ, ಆಸ್ಪತ್ರೆಗಳಿಗೆ ತರಿಸಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಬಂ.ಕೃಷ್ಣ: ಮಾನ್ಯ ಸದಸ್ಯರು ಕೊಟ್ಟರತಕ್ಕಂಥ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಆಚರಣೆಗೆ ತರಲಾಗುತ್ತದೆ.

ಶ್ರೀ ಹೆಚ್.ಕಿ.ಬಸವರಾಜು: ಮಾನ್ಯ ಅಧ್ಯಕ್ಷರೆ ಪರಿಯಾಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದರಿಂದ ಸದರಿ ಯೋಜನೆಯನ್ನು ಡಿಸೆಂಬರ್ 2001ರೊಳಗೆ ಮುಗಿಸಲು ಅಂದಾಜು ಮಾಡಲಾಗಿತ್ತು. ಆದರೆ, ಏನಾಕಾರಣ 2002ನೇ ಇಸವಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ, ಈ ಯೋಜನೆ ಯಾವಾಗ ಪ್ರಾರಂಭ ಆಯಿತು ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕು. ಹಾಗೆಯೇ ಅನಗತ್ಯ ವಿಳಂಬಕ್ಕೆ ಕಾರಣ ಏನೆಂದು ಕೇಳಲು ಬಯಸುತ್ತೇನೆ. ಜಮೀನು ಕಳೆದುಕೊಂಡಿರುವವರಿಗೆ ಪರಿಹಾರ ನೀಡಿದ ನಂತರ ಕಾಮಗಾರಿ ಕೈಗೊಳ್ಳಲಾಗುವುದೆಂದು ಕಾರಣ ಹೇಳಿದ್ದಾರೆ.

ಶ್ರೀ ಎಸ್.ಬಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಸದರಿ ಪ್ರಶ್ನೆಯನ್ನು ಬನದ ಕೊನೆಯಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದು ಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಐ.ಟಿ.ಐ.ಎಸ್., ಐ.ಪಿ.ಎಸ್. ಮತ್ತು ಐ.ಟಿಪ್ಲಾ.ಎಸ್. ಸಂಸ್ಥೆಗಳು.

183(2375)

ಶ್ರೀ ಸಭಾಪತಿ ಯು.ಆರ್(ಉಡುಪಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಐ.ಟಿ.ಐ.ಎಸ್., ಐ.ಪಿ.ಎಸ್. ಮತ್ತು ಐ.ಟಿಪ್ಲಾ.ಎಸ್. ಸಂಸ್ಥೆಗಳ ಸಂಖ್ಯೆ ಎಷ್ಟು: (ಎವರ ನೀಡುವುದು)

ಆ. ಖಾಲಿಯಿರುವ ಸಂಸ್ಥೆಗಳೆಷ್ಟು; ಅವು ಯಾವವು: (ಎವರ ನೀಡುವುದು)

ಇ. ಈ ಹುದ್ದೆಗಳನ್ನು ಕಡಿತಗೊಳಿಸುವ ಬಗ್ಗೆ ಸರ್ಕಾರ ಯೋಚನೆ ಮಾಡಿದೆಯೆ;

ಈ. ಈ ಹುದ್ದೆಗಳಿಗಾಗಿ ಸರ್ಕಾರದ ಬೊಕ್ಕಸದಿಂದ ಪ್ರತಿವರ್ಷ ಎಷ್ಟು ಹಣ ವೆಚ್ಚ ಮಾಡಲಾಗುತ್ತಿದೆ? (ಏವರ ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ. 1) ಐ.ಎ.ಎಸ್. : 213

2) ಐ.ಪಿ.ಎಸ್. : 119

3) ಐ.ಎಫ್.ಎಸ್. : 151

ಆ. ಯಾವ ಹುದ್ದೆಗಳೂ ಖಾಲಿ ಇರುವುದಿಲ್ಲ.

ಇ. ಇಲ್ಲ.

ಈ. 1) ಐ.ಎ.ಎಸ್. : ರೂ.7,34,38,000/-

2) ಐ.ಪಿ.ಎಸ್. : ರೂ.3,01,91,000/-

3) ಐ.ಎಫ್.ಎಸ್. : ರೂ.4,43,38,000/-

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ 218 ಐ.ಎ.ಎಸ್. ಹುದ್ದೆಗಳು ಏವೆ ಎಂದು ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಹಾಗೆಯೇ ಪದ್ಯಕ್ಕೆ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲವೆಂದು ತಿಳಿಸಿದ್ದಾರೆ. ಪ್ರವಾಸ ಭತ್ಯೆ, ತುಟ್ಟಿಭತ್ಯೆ ಹಾಗೂ ದೂರವಾಣಿ ವೆಚ್ಚ ಐ.ಎ.ಎಸ್ ಅಧಿಕಾರಿಗಳಿಗೋಸ್ಕರ ಪ್ರತಿ ವರ್ಷ ಎಷ್ಟು ಹಣ ಖರ್ಚಾಗುತ್ತದೆ ಎಂಬುದರ ಬಗ್ಗೆ ಏವರವನ್ನು ಕೇಳಿದ್ದೆನು. ಆದರೆ, 7 ಕೋಟಿ 34 ಲಕ್ಷ 38 ಸಾವಿರ ರೂಪಾಯಿ ಇವರುಗಳಿಗೆ ಕೊಡತಕ್ಕಂಥ ಸಂಬಳದ ಹಣದ ಬಗ್ಗೆ ಮಾತ್ರ ಮಾಹಿತಿ ಕೊಟ್ಟಿದ್ದಾರೆ. ಆದರೆ ನಾನು ಕೇಳಿರತಕ್ಕಂಥ ವಿಷಯದ ಬಗ್ಗೆ ಪೂರ್ಣವಾದ ಮಾಹಿತಿ ಸಿಕ್ಕಿಲ್ಲ. 218 ಐಎಎಸ್ ಹುದ್ದೆಗಳು ನಮ್ಮ ರಾಜ್ಯ ಸರ್ಕಾರಕ್ಕೆ ಅಗತ್ಯತೆ ಇದೆಯೆ? ಹಾಗೆಯೇ ಇವತ್ತಿನದಿವಸ ಶಾಸಕರು ಸರ್ಕಾರಿ ಬಸ್‌ಗಳಲ್ಲಿ ಹೋಗಬೇಕೆಂದು ಮತ್ತು ಮಂತ್ರಿಗಳು ಪ್ರವಾಸಿ ಮಂದಿರಗಳಲ್ಲಿ ಉಳಿದುಕೊಳ್ಳಬೇಕೆಂದು ನಿಯಮಾವಳಿ ಇದೆ. ಆದರೆ, ಐ.ಎ.ಎಸ್ ಅಧಿಕಾರಿಗಳು ಫೈವ್‌ಸ್ಟಾರ್ ಹೋಟೆಲ್‌ಗಳಲ್ಲಿ ಉಳಿದುಕೊಳ್ಳುತ್ತಿದ್ದಾರೆ. ಹಾಗೆಯೇ ಬೆಂಗಳೂರಿಗೆ ಬರಬೇಕಾದರೆ ಕಾರು ಅಥವಾ ವಿಮಾನದ ಮೂಲಕ ಬರುತ್ತಾರೆ. ವರ್ಷಂಪ್ರತಿ ಸದರಿ

ಅಧಿಕಾರಿಗಳು ವಿದೇಶಿ ಪ್ರಯಾಣ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರೂ ನಿಯಂತ್ರಣ ಮಾಡಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತಿದೆಯೇ? ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಐಎಎಸ್ ಮತ್ತು ಐಪಿಎಸ್ ಹಾಗೂ ಐಎಫ್‌ಸಿ ಅಧಿಕಾರಿಗಳ ಸಂಖ್ಯೆ ನಮ್ಮ ರಾಜ್ಯದಲ್ಲಿ ಎಷ್ಟಿದೆ ಎಂದು ಪ್ರಶ್ನೆ ಕೇಳಿದ್ದಾರೆ. ಹಾಗೆಯೇ, ಸದರಿ ಅಧಿಕಾರಿಗಳಿಗೆ ಆಗತಕ್ಕಂಥ ವೆಚ್ಚವನ್ನು ಕೇಳಿದ್ದಾರೆ. ಈ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಲಾಗಿದೆ. ಇದೇ ಪ್ರಶ್ನೆಯಲ್ಲಿ ಸದರಿ ಅಧಿಕಾರಿಗಳು ವಿಮಾನ ಅಥವಾ ಟ್ರೈನ್‌ನಲ್ಲಿ ಹೋಗುತ್ತಾರೆಯೇ ಎಂದು ಕೇಳಿದ್ದರೆ ಅದಕ್ಕೆ ಉತ್ತರವನ್ನು ಒದಗಿಸಿಕೊಡಲಾಗುತ್ತಿತ್ತು. ನಮ್ಮ ರಾಜ್ಯಕ್ಕೆ ಐ.ಎ.ಎಸ್. ಅಧಿಕಾರಿಗಳು ಅವಶ್ಯಕತೆಗೆ ಬೇಕಾಗಿರತಕ್ಕಂಥ ಸಂಖ್ಯೆಯಲ್ಲಿ ಪಡೆದು-ಕೊಳ್ಳಲಾಗುತ್ತದೆಯೇ ಹೊರತು ಹೆಚ್ಚಿನ ಸಂಖ್ಯೆಯಲ್ಲಿ ಪಡೆದುಕೊಳ್ಳತಕ್ಕಂಥದ್ದು ಸರ್ಕಾರದ ನೀತಿ ಅಲ್ಲ. ಹಾಗೆಯೇ ಈಗ ಇರತಕ್ಕಂಥ ಐ.ಎ.ಎಸ್. ಅಧಿಕಾರಿಗಳನ್ನು ರ್‍ಯಾಶನ್‌ಲೈಜೇಶನ್ ಮಾಡಬೇಕೆಂದು ಆಡಳಿತ ಸುಧಾರಣಾ ಆಯೋಗ ಮಾಡಿರತಕ್ಕಂಥ ಶಿಫಾರಸ್ಸುಗಳ ಆಧಾರದ ಮೇಲೆ ನಾವು ಇಂಟರ್‌ನಲ್ ಎಕ್ಸ್‌ರ್‌ಸೈಜ್ ಮಾಡುತ್ತಿದ್ದೇವೆ. ಈಗಾಗಲೇ ಪ್ರಾರಂಭಿಕವಾಗಿ ನಾಲ್ಕು ವಿಭಾಗೀಯ ಮಟ್ಟದ ಕಮೀಷನರ್ ಹುದ್ದೆಗಳನ್ನು ನಾವು ರದ್ದು ಮಾಡಿದ್ದೇವೆ. ಹಾಗೆಯೇ ಇವುಗಳನ್ನು ಮುಕ್ತಾಯಗೊಳಿಸಲು ನಾಲ್ಕು ವಿಭಾಗದಲ್ಲಿಯೂ ಕೂಡ ವಿಶೇಷ ಅಧಿಕಾರಿಗಳನ್ನು ಹಾಕಿ ಸದರಿ ಹುದ್ದೆಗಳನ್ನು ವೈಂಡ್‌ಆಫ್ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇದರಿಂದ ಮುಂದಿನ ವರ್ಷಗಳಲ್ಲಿ ನಮಗೆ ಐ.ಎ.ಎಸ್. ಅಧಿ ಕಾರಿಗಳ ಅವಶ್ಯಕತೆ ಬಹುಶಃ ಕಡಿಮೆ ಆಗುತ್ತದೆ. ಆದರೆ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದೇನೆಂದರೆ, ಪ್ರತಿ ವರ್ಷ ಐಎಎಸ್ ಅಧಿ ಕಾರಿಗಳು ನಿವೃತ್ತಿ ಹೊಂದುತ್ತಿರುತ್ತಾರೆ. ನಿವೃತ್ತಿ ಹೊಂದಿ ಖಾಲಿ ಉಳಿಯತಕ್ಕಂಥ ಸ್ಥಳಗಳಿಗೆ ಬೇರೊಬ್ಬರನ್ನು ತುಂಬಬೇಕಾಗಿರತಕ್ಕಂಥ ಅವಶ್ಯಕತೆಯನ್ನು ಗಮನಿಸಿ ನಾವು ರ್‍ಯಾಶನಲೈಜೆಶನ್ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಯು.ಆರ್.ಸಭಾಪತಿ: 10 ವರ್ಷಗಳಿಂದೀಚೆಗೆ ಐಎಎಸ್ ಅಧಿಕಾರಿ ವರ್ಗದವರಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗೆಯೇ ಅಪಾರ ಅಕ್ರಮ ಸಂಪತ್ತನ್ನು ಹೊಂದಿರತಕ್ಕಂಥ ಐಎಎಸ್ ಅಧಿಕಾರಿಗಳ ಮೇಲೆ ಯಾವುದಾದರೂ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗಿದೆಯೇ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಸದರಿ ಪ್ರಶ್ನೆಯಲ್ಲಿ ಈ ಉಪಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು: ನೀವು ಈಗಾಗಲೇ ಕೇಳಿರತಕ್ಕಂಥ ಪ್ರಶ್ನೆಯಲ್ಲಿ ಈ ಪ್ರಶ್ನೆಯನ್ನೂ ಕೇಳಿದ್ದರೆ ಉತ್ತರ ರೆಡಿ ಮಾಡುತ್ತಿದ್ದರು.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಆಡಳಿತದ ವ್ಯವಸ್ಥೆಯಲ್ಲಿ ಐಎಎಸ್ ಅಧಿಕಾರಿಗಳ ಗುಣಮಟ್ಟ ಅಷ್ಟೊಂದು ಸಮರ್ಪಕವಾಗಿರುವುದಿಲ್ಲ. ಆದ್ದರಿಂದ, ಕೆಎಎಸ್ ಮಾಡಿರತಕ್ಕಂಥ ಹಿರಿಯ ಶ್ರೇಣಿಯ ಅಧಿಕಾರಿಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟರೆ ಒಳ್ಳೆಯದು. ಏಕೆಂದರೆ, ಇವರು ಸ್ಥಳೀಯ ಪ್ರಾಂತ್ಯದ ಬಗ್ಗೆ ಮತ್ತು ಸ್ಥಳೀಯ ಜನರ ಭಾವನೆಗಳನ್ನು ಅರ್ಥ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮುಂಬರುವ ದಿವಸಗಳಲ್ಲಿ ಐಎಎಸ್ ಅಧಿಕಾರಿಗಳು ನಿವೃತ್ತಿ ಆದಂಥ ಜಾಗಗಳಲ್ಲಿ ಕೆಎಎಸ್ ಅಧಿಕಾರಿಗಳನ್ನು ನೇಮಕ ಮಾಡಿದರೆ ಅನುಕೂಲವಾಗುತ್ತದೆ. ಈಗಾಗಲೇ ಚೆನ್ನೈ ಮತ್ತು ಆಂಧ್ರಪ್ರದೇಶ ಹಾಗೂ ಇತರೇ ರಾಜ್ಯಗಳಲ್ಲಿ ಈ ಒಂದು ವ್ಯವಸ್ಥೆ ಜಾರಿಯಲ್ಲಿ ಇದೆ. ಈ ಒಂದು ವ್ಯವಸ್ಥೆಯಿಂದ ನಮ್ಮ ರಾಜ್ಯದ ಜನರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸಿ ಕೊಡುವಂಥ ಅವಕಾಶ ಆಗುತ್ತದೆ. ಬೇರೆ ಬೇರೆ ರಾಜ್ಯಗಳಿಂದ ಬಂದಿರತಕ್ಕಂಥ ಐಎಎಸ್ ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡುವ ಔಚಿತ್ಯ ಇಲ್ಲ ಎಂದು ರಾಮಸ್ವಾಮಿಯವರು ನೀಡಿರತಕ್ಕಂಥ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಸರ್ಕಾರ ಇದನ್ನು ಮನಗೊಂಡು ಆಡಳಿತ ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ರಾಮಸ್ವಾಮಿ ಆಯೋಗಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡುತ್ತೀರಾ? ಐಎಎಸ್ ಹುದ್ದೆಗಳನ್ನು ಕಡಿಮೆ ಮಾಡಿ ಕೆಎಎಸ್ ಅಧಿಕಾರಿಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಭಾವನೆಗಳಿಗೆ ನನ್ನ ಸಹಮತವನ್ನು ಎರಡನೇ ಭಾಗದ ಪ್ರಶ್ನೆಗೆ ವ್ಯಕ್ತಪಡಿಸುತ್ತೇನೆ. ಮೊದಲನೇ ಭಾಗದ ಪ್ರಶ್ನೆಗೆ ನಾನು ಉತ್ತರ ಕೊಡತಕ್ಕಂಥ ಪ್ರಯತ್ನವನ್ನು ಮಾಡುವುದಿಲ್ಲ. ಆದರೆ ನಮ್ಮ ವ್ಯವಸ್ಥೆಯಲ್ಲಿ ಪ್ರತಿಯೊಂದು ರಾಜ್ಯವೂ ಕೂಡ ತನ್ನದೇ ಆದಂಥ ಒಂದು ನೀತಿಯನ್ನು ಹಮ್ಮಿಕೊಂಡಿರುತ್ತದೆ. ಈಗಿನ ಪ್ರಸ್ತಾವನೆಯ ಪ್ರಕಾರ 33 ಪರ್ಸೆಂಟ್‌ನಷ್ಟು ಕರ್ನಾಟಕ ಶ್ರೇಣಿಯ ಅಧಿಕಾರಿಗಳಿಗೆ ಬಡ್ತಿಯನ್ನು ಐಎಎಸ್ ಕೇಡರ್‌ಗೆ ಕೊಡತಕ್ಕಂಥ ವ್ಯವಸ್ಥೆ ಇದೆ. ಇದನ್ನು ಕನಿಷ್ಟ 50 ಪರ್ಸೆಂಟ್‌ಗೆ ಹೆಚ್ಚಿಸಬೇಕು ಎನ್ನತಕ್ಕಂಥದ್ದು ರಾಜ್ಯ ಸರ್ಕಾರದ ಅನಿಸಿಕೆಯಾಗಿದೆ. ಈಗಾಗಲೇ ನಾನು ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ ಈ ಬಗ್ಗೆ ನಿರ್ದೇಶನವನ್ನು ಕೊಟ್ಟಿದ್ದೇನೆ. ಸದರಿ ಪ್ರಕ್ರಿಯೆ ಹೇಗೆ ಮುಂದುವರಿಸಬೇಕೆಂದು ಮತ್ತು ಇದಕ್ಕೆ ಕೇಂದ್ರ ಸರ್ಕಾರದ ಸಹಮತ ಅವಶ್ಯಕತೆ ಇರುವುದರಿಂದ ಇದನ್ನು ಹೇಗೆ ಪಡೆಯಬೇಕೆಂಬುದರ ಬಗ್ಗೆ ನಾನು ಮತ್ತು

ಮುಖ್ಯ ಕಾರ್ಯದರ್ಶಿಯವರು ಚಿಂತನೆ ಮಾಡತಕ್ಕಂಥ ಹಂತದಲ್ಲಿದ್ದೇವೆ. ಮಾನ್ಯ ಸದಸ್ಯರ ಮತ್ತು ಸದನದ ಗಮನಕ್ಕೆ ಹೇಳುವುದೇನೆಂದರೆ, ನಿಮ್ಮ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇದರ ಬಗ್ಗೆ ಈಗಾಗಲೇ ನಮ್ಮ ಯೋಜನೆಯನ್ನು ನಾವು ನಿಯೋಜಿಸಿದ್ದೇವೆ.

ಕೇಂದ್ರ ಸರ್ಕಾರದ ಅನ್ನಪೂರ್ಣ ಯೋಜನೆ ಕುರಿತು.

184(2380)

ಶ್ರೀ ರಾಮದಾಸ್ ಎ.(ಕೃಷ್ಣರಾಜ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ವರ್ಗದವರನ್ನು ಗುರುತಿಸುವ ಕೆಲಸ ಯಾವ ಹಂತದಲ್ಲಿದೆ; ಎಷ್ಟು ಜನ ಈ ಪಟ್ಟಿಯಲ್ಲಿದ್ದಾರೆ; ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಇದೆ;

ಆ) ಕೇಂದ್ರ ಸರ್ಕಾರದ ಅನ್ನಪೂರ್ಣ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆಯೇ? ಎಂದಿನಿಂದ ಜಾರಿಗೆ ಬಂದಿದೆ; ಎಷ್ಟು ಜನ ಫಲಾನುಭವಿಗಳು ಸದರಿ ಯೋಜನೆಯಡಿ ಲಾಭ ಪಡೆಯುತ್ತಿದ್ದಾರೆ; (ವಿವರ ನೀಡುವುದು)

ಇ) ಪ್ರಧಾನ ಮಂತ್ರಿಗಳ ಅಂತ್ಯೋದಯ ಅನ್ನ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆಯೇ; ಎಂದಿನಿಂದ ಜಾರಿಗೆ ಬಂತು. ಈ ಯೋಜನೆಯಡಿಯಲ್ಲಿ ಎಷ್ಟು ಜನ ಲಾಭ ಪಡೆಯುತ್ತಿದ್ದಾರೆ. (ವಿವರ ನೀಡುವುದು)

ಈ) ಈ ಬಗ್ಗೆ ರಾಜ್ಯ ಸರ್ಕಾರದ ಯಾವುದಾದರೂ ಹೊಸ ಯೋಜನೆ ಜಾರಿಯಲ್ಲಿದೆಯೆ?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು):

ಅ) ರಾಜ್ಯದ 27 ಜಿಲ್ಲೆಗಳ ಪೈಕಿ, ಗುಲ್ಬರ್ಗ, ಚಿಕ್ಕಮಗಳೂರು, ತುಮಕೂರು ಮತ್ತು ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ ಪೂರ್ಣವಾಗಿ ಹಾಗೂ ಬೀದರ್ ಜಿಲ್ಲೆಯಲ್ಲಿ ಭಾಗಶಃವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಆಯಾ ಗ್ರಾಮಸಭೆಯ ಮೂಲಕ ಗುರುತಿಸುವ